ಶ್ರೀ ಎಂ. ಎಸ್. ಕೃಷ್ಣನ್.—ದೇವರಂ ವರ ಕೊಟ್ಟರೂ ಪೂಜಾರಿ ವರ ಕೊಡ ಎಂಬಂತೆ ಆಗಿದೆ. ಈ ಬಾಕಿ ಹಣವನ್ನು ಒಂದೇ ಸಲ ಕೊಡಲು ಸಾಧ್ಯವಾಗದಿದ್ದರೆ ಕಂತಿನ ರೂಪದಲ್ಲಿಯಾದರೂ ಕೊಡುತ್ತೀರಾ ? ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಅಧ್ಯಕ್ಷರು.—ತಾವು ಈ ರೀತಿ ಮಾಡಿದರೆ ಹೇಗೆ ? ಮಾನ್ಯ ಮಂತ್ರಿಗಳ ಉತ್ತರ ತಮಗೆ ಸರಿ ಕಾಣದಿದ್ದರೆ ಅರ್ಧ ಗಂಟೆ ಕಾಲದ ಚರ್ಚೆಗೆ ನೋಟೀಸ್ ಕೊಡಿ. ವಾರದಲ್ಲಿ ಎರಡು ಸಲ ಅಂದರೆ ಮಂಗಳವಾರ ಮತ್ತು ಬುಧವಾರ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾವಂಯ್ಯ.—ಈಗ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿಯ ನೌಕರರಂ ಈ ಬಗ್ಗೆ ಮುಷ್ಕರದ ನೋಟೀಸ್ ಕೊಟ್ಟಿದ್ದಾರೆ. ಇನ್ನು ನಾಲ್ಕು ದಿವಸಗಳಲ್ಲಿ ಇದನ್ನು ಇತ್ಯರ್ಥ ಮಾಡದಿದ್ದರೆ ನೀರು ಸರಬರಾಜನ್ನು ನಿಲ್ಲಿಸುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಕೂಡಲೇ ಇತ್ಯರ್ಥ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣಕಾಸಿನ ತೊಂದರೆಯಿಂದ ೧-೧-೮೯ರಿಂದ ಜಾರಿಗೆ ಕೊಡುವುದಕ್ಕೆ ಆಗಿಲ್ಲ. ೧-೧-೮೯ರಿಂದ ಜಾರಿಗೆ ಕೊಟ್ಟರೆ ಒಂದು ಕೋಟಿಗೂ ಹೆಚ್ಚು ಖರ್ಚು ಬರುತ್ತದೆ ಈಗ ಹಣಕಾಸಿನ ತೊಂದರೆ ಇರುವುದರಿಂದ ಅಲ್ಲಿನ ನೌಕರರು ಸಂಪು ಹೂಡಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ. ಹಣಕಾಸಿನ ಪರಿಸ್ಥಿತಿ ಉತ್ತಮವಾದ ಮೇಲೆ ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಅವರಿಗೆ ಹಣ ಕೊಡುತ್ತೇವೆಂಬ ಮಾತನ್ನು ಹೇಳುತ್ತೇನೆ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದು ಸುಪ್ರೀಂ ಕೋರ್ಟಿನ ಆದೇಶವಿದ್ದರೂ ಈ ರೀತಿ ಮಾಡಂವುದು ಏತಕ್ಕೆ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎನ್. ಎಂ. ಅಡ್ಯಂತಾಯ.—ಅಂದರೆ ನಾವು ಪ್ರಶ್ನೆ ಕೇಳುವುದು ಬೇಡವೇ ? ತಾವು ಈ ರೀತಿ ಹೇಳಿದರೆ ಹೇಗೆ ?

ಅಧ್ಯಕ್ಷರು.—ನನಗೆ ಆ ರೀತಿ ಹೇಳಲು ಅಧಿಕಾರ ಇದೆ. ನಾನು ಬೇರೆ ಸದಸ್ಯರಿಗೂ ಅವರ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಬೇಕಾಗಿದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಸರ್ಕಾರದವರು ಪೇ ಕಮೀಷನ್ ರಿಪೋರ್ಟ್‌ನ್ನು ಆಕ್ಸೆಪ್ಟ್ ಮಾಡಿದ್ದೀರಿ, ಅದೇರೀತಿ ದಿನಗೂಲಿ ಕೆಲಸಗಾರರಿಗೆ ಸಂಬಳ ಏಕೆ ಕೊಡಬಾರದು ?

ಶ್ರೀ ಆರ್. ವೆಂಕಟರಾವಂಯ್ಯ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಆಫ್ ಆನ್ ಅವರ್ ಡಿಸ್ಕಷನ್‌ಗೆ ಹಾಕಿ ಎಂದು ಎಂ. ಎಸ್. ಕೃಷ್ಣನ್‌ರವರಿಗೆ ಹೇಳಿದ್ದೇನೆ. ಅರ್ಧ ತಾಸು ಅವಕಾಶ ಮಾಡಿಕೊಡುತ್ತೇನೆ. ಈಗ ಧರ್ಮಪ್ಪನವರೇ ತಮ್ಮ ಪ್ರಶ್ನೆಯನ್ನು ಕೇಳಿ.

ಚಂದ್ರಾ ಬಡಾವಣೆಯಲ್ಲಿ ನೆಲಮಟ್ಟದ ಜಲಾಶಯದ ನಿರ್ಮಾಣ.

೬೨೯. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಂದ್ರಾ ಬಡಾವಣೆಗೆ ಕುಡಿಯುವ ನೀರು ಒದಗಿಸಲು ೧ ಕೋಟಿ ೩೨ ಲಕ್ಷ ರೂ.ಗಳನ್ನು ಕಟ್ಟಿ ೩-೪ ವರ್ಷಗಳು ಕಳೆದರೂ ನೀರನ್ನು ಒದಗಿಸುವ ಕಾರ್ಯವು ಸಮರ್ಪಕವಾಗಿ ನಡೆಯದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅ) ಸದರಿ ಬಡಾವಣೆಯಲ್ಲಿ ನೆಲಮಟ್ಟದ ರಿಸರ್ವಾಯರ್ ಕಟ್ಟಲು ಜಮೀನನ್ನು ನೀಡಿದ್ದರೂ ಟೆಂಡರ್ ಕರೆಯದೆ ನಿರ್ಲಕ್ಷ್ಯ ಮಾಡುತ್ತಿರುವ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ?

ಇ) ಸದರಿ ಬಡಾವಣೆಗೆ ಜರೂರಾಗಿ ನೀರು ಒದಗಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು ?

ಶ್ರೀ ಎ. ಲಕ್ಷ್ಮೀ ಸಾಗರ್ (ನ್ಯಾಯ ಮತ್ತು ಸಂಸದೀಯ ವ್ಯವಹಾರ, ಆಹಾರ, ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ರಿಸರ್ವಾಯರ್ ಕಟ್ಟಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಜಾಗವನ್ನು ಬದಲಾಯಿಸುವ ಆಲೋಚನೆಯಿದ್ದುದರಿಂದ ಇದನ್ನು ಕಟ್ಟಲು ನಿಧಾನವಾಯಿತು. ಆದುದರಿಂದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ವಿತರಣಾ ಕೊಳವೆಗಳನ್ನು ಹಾಕಿದ ನಂತರ ನೀರೊದಗಿಸಲು ಜಲ ಮಂಡಲಿಯು ಯೋಜನೆ ಹಾಕಿಕೊಂಡಿದೆ.

ಶ್ರೀ ಬಿ. ಧರ್ಮಪ್ಪ.—ಮಾನ್ಯ ಅಧ್ಯಕ್ಷರೇ, ಮೊದಲನೆ ಪ್ರಶ್ನೆಯಲ್ಲಿ ಸುಮಾರು ೩-೪ ವರ್ಷಗಳಾದರೂ ಏನೂ ಕೆಲಸ ಮಾಡಿಲ್ಲ. ಸುಮಾರು ಒಂದು ಕೋಟಿ ೩೨ ಲಕ್ಷ ಕಟ್ಟಿದ್ದರೂ ಕೇವಲ ೧೧ ಲಕ್ಷ ಖರ್ಚು ಮಾಡಿದ್ದಾರೆ ಎಂದು ಕೇಳಿದ್ದೇನೆ. ಅಲ್ಲಿ ಸಾವಿರಾರು ಜನರು ವಾಸ ಮಾಡುತ್ತಾ ಇದ್ದಾರೆ. ಅವರಿಗೆ ನೀರಿನ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಸೈಟು ಕೊಟ್ಟಿದ್ದಾರೆ. ಮನೆ ಮಾಡಿದ್ದಾರೆ ಆದರೆ ಏನೂ ವ್ಯವಸ್ಥೆ ಇಲ್ಲ. ಇಂತಹ ಪರಿಸ್ಥಿತಿ ಇದೆ. ಏನು ಮಾಡುತ್ತೀರಿ? ಈಗಾಗಲೇ ಬಿ. ಡಿ. ಎ.ನವರು ಸೈಟು ಕೊಟ್ಟಿದ್ದಾರೆ. ಬರೀ ಆಲೋಚನೆ ಮಾಡುವುದರಲ್ಲೇ ೩-೪ ವರ್ಷ ಕಳೆದರೆ ಶುರು ಮಾಡುವುದು ಯಾವಾಗ ? ಎರಡನೆಯದಾಗಿ, ನೀರನ್ನು ಏನಾದರೂ ಇಪ್ಪು ದಿವಸದಲ್ಲಿ ಕೊಡುತ್ತೇವೆ ಎಂದು ಹೇಳಿದ್ದೀರಾ ? ಅದಕ್ಕೆ ಏನಾದರೂ ಗಡುವು ಕೊಟ್ಟಿದ್ದೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಜಲ ಸಂಗ್ರಹಕಾರದ ಪ್ರದೇಶವನ್ನು ಕಟ್ಟುವುದಕ್ಕೋಸ್ಕರ ೯-೧೦-೧೯೮೭ರಲ್ಲಿ ಜಾಗ ಕೊಟ್ಟಿದ್ದಾರೆ. ಅಂದರೆ ಈ ವರ್ಷ ಜನವರಿಯಲ್ಲಿ ಕೊಟ್ಟಿದ್ದಾರೆ. ಅಲ್ಲಿ ಜಲಸಂಗ್ರಹಗಾರವನ್ನು ನಿರ್ಮಾಣ ಮಾಡಬೇಕು, ಅದನ್ನು ಬೇಗ ಮಾಡಿಸುವುದಕ್ಕೆ ನಾನು ಏರ್ಪಾಟು ಮಾಡುತ್ತೇನೆ.

ಶ್ರೀ ಬಿ. ಧರ್ಮಪ್ಪ.— ಕೊನೇ ಪಕ್ಷ ಎಷ್ಟು ದಿವಸದಲ್ಲಿ ಮುಗಿಸುತ್ತೀರಿ ?

ಅಧ್ಯಕ್ಷರು.—ತಾವು ವಕೀಲರು. ಅವರು ಬೇಗ ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದಾರೆ.

ಗುಲ್ಬರ್ಗಾ ನಗರದಲ್ಲಿ ಹುಡ್ಕೋ ಯೋಜನೆಯಡಿಯಲ್ಲಿ ಗೃಹಗಳನ್ನು ಹಂಚುವ ಬಗ್ಗೆ

೧೦೨. ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗಾ).—ಮಾನ್ಯ ಗೃಹನಿರ್ಮಾಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗುಲ್ಬರ್ಗ ನಗರದಲ್ಲಿ ಬಡೆಪುರ, ರಾಜಪುರ ಮತ್ತು ಎಂ. ಎಸ್. ಕೆ. ಮಿಲ್ಲಿನ ಹತ್ತಿರ ಕರ್ನಾಟಕ ಗೃಹ ಮಂಡಳಿಯವರು ಹುಡ್ಕೋ ಯೋಜನೆಯಡಿಯಲ್ಲಿ ಕಟ್ಟಿದ ಮನೆಗಳು ಎಂದು ಪೂರ್ತಿಗೊಂಡಿವೆ ? ಹಾಗೂ ಕಟ್ಟಡಗಳ ಪ್ರಾರಂಭ ಮತ್ತು ಮುಕ್ತಾಯ ಯೋಜನಾ ಬದ್ಧವಾಗಿದೆಯೇ ?

ಆ) ಕಟ್ಟಡಗಳ ನಿರ್ಮಾಣ ಕಾರ್ಯವು ನಿಗದಿತ ಸಮಯದಲ್ಲಿ ಆಗದಿದ್ದರೆ ಅದಕ್ಕೆ ಕಾರಣವೇನು ? ಮತ್ತು ನಿಗದಿತ ದರಕ್ಕಿಂತ ಮನೆಗಳ ವೆಚ್ಚ ಎಷ್ಟು ಹೆಚ್ಚಾಯಿತು ?

ಇ) ಎಲ್ಲಾ ಮನೆಗಳ ಹಂಚಿಕೆ ಪಡೆದವರಲ್ಲಿ ಎಷ್ಟು ಜನರಿಗೆ ಮಾಲಿಕತ್ವ ಕೊಡಲಾಯಿತು ?